ಅಮೆರಿಕದಂಥ ಶ್ರೀಮಂತ ದೇಶಗಳಲ್ಲಿ ದುಡಿಯುವ ಮಾರ್ಗ ಹಲವು. ಆ ಕಾರಣಕ್ಕಾಗಿ ಹುಟ್ಟಿದ ಮಕ್ಕಳು ಹದಿಹರೆಯದಲ್ಲೇ ತಂದೆ ತಾಯಿಗಳಿಂದ ಬೇರಾಗುತ್ತಾರೆಂಬುದನ್ನು, ತಾವೇ ಸ್ವತಃ ದುಡಿದು ಓದುತ್ತಾರೆಂಬುದನ್ನು ಕೇಳಿದ್ದೆ. ತಂದೆ ತಾಯಿಗಳು ಮಕ್ಕಳೊಡನೆ ಸೇರುವುದು ಅಷ್ಟಕ್ಕಷ್ಟೆ ಎಂಬ ಮಾತೂ ಇದೆ. ಹಾಗಿದ್ದರೆ ಜೇಮ್ಸ್ ಸೈಮನ್ ಅವರಿಗೆ ಮಕ್ಕಳು ತೀರಿಕೊಂಡ ದುಃಖ ಅಷ್ಟರ ಮಟ್ಟಿಗೆ ಕಾಡಿದ್ದು ಹೇಗೆ? ಯಾವುದೇ ಸಂಬಂಧವೂ ನಾವು ಕೂತ ಕಡೆಯೇ ಸಾರಾಸಗಟಾಗಿ ಮಾತನಾಡಿದಂತೆ ಇರುವುದಿಲ್ಲ. ನಾಗರಿಕತೆಯ ದೇಶಗಳಲ್ಲಿಯೂ ಮನುಷ್ಯ ಸಂಬಂಧದ ಭಾವನೆಗಳು ಇನ್ನಷ್ಟು ಹೆಚ್ಚು ಸೂಕ್ಷ್ಮವಾಗಿರುತ್ತವೆನಿಸಿತು. ದುಡಿಮೆಯ ಕಾರಣಕ್ಕೆ ಬೇರೆಯಾದ ತಕ್ಷಣ ಆಮೇಲೂ ಉಳಿದಿರಬಹುದಾದ ಸಂಬಂಧಗಳು ಗಟ್ಟಿಯಾಗಿರುವುದಿಲ್ಲವೆಂದು ಹೇಗೆ ಹೇಳುವುದು? ಮಕ್ಕಳ ಅಗಲಿಕೆಯ ಕಾರಣಕ್ಕೆ ಜೇಮ್ಸ್ ಸೈಮನ್ ಯಾರನ್ನೂ ಭೇಟಿ ಮಾಡದೆ ತಾವಿರುವಲ್ಲಿಯೇ ಇದ್ದು ಮಾಡುವ ಕಾಯಕವನ್ನು ಮುಂದುವರೆಸಿ ಏಕಾಂತದಲ್ಲಿ ತನ್ನ ದುಃಖವನ್ನು ಶಮನ ಮಾಡಿಕೊಳ್ಳುತ್ತಿರಬಹುದೇ ಎನಿಸಿತು. ಕೋಟ್ಯಂತರ ರೂಪಾಯಿಗಳನ್ನು ವಿಶ್ವವಿದ್ಯಾಲಯಗಳಿಗೆ ನೀಡಿ, ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ನಿರಂತರ ಮಾತನಾಡುತ್ತಲೇ ಹೋಗುವ ಅವರು ಯಾರೊಂದಿಗೂ ಮಾತನಾಡುವುದಿಲ್ಲ ಎಂಬುದಕ್ಕೆ ವಿಶೇಷ ಅರ್ಥವಿಲ್ಲವೆನಿಸಿತು. ಇದಕ್ಕಿಂತಲೂ ಮುಖ್ಯವಾಗಿ, ಅತಿ ಸೂಕ್ಷ್ಮ ಮನಃಸ್ಥಿತಿಯುಳ್ಳವರಿಗೆ ತಮ್ಮ ಪ್ರಿಯ ಜೀವಗಳು ಕಳೆದುಹೋದರೆ ಅವರು ಏಕಾಂತವನ್ನು ಹುಡುಕಿಕೊಳ್ಳುವ ಪರಿಪಾಠವೂ ಇದೆ.

ಬಾಲ್ಯಕಾಲದಲ್ಲಿ ನನ್ನದೇ ಗ್ರಾಮದಲ್ಲಿದ್ದ ಒಬ್ಬ ಹೆಂಗಸು ತಮ್ಮ ಪ್ರೀತಿ ಪಾತ್ರ ಮಗಳೊಬ್ಬಳು ಪ್ರಾಯ ಕಾಲದಲ್ಲಿ ತೀರಿಕೊಂಡ ಕಾರಣಕ್ಕಾಗಿ ಜೀವನಪರ್ಯಂತ ಊರು ಬಿಟ್ಟು ಆಚೆ ಹೋಗದೆ ತಾವಿದ್ದ ಒಂದೇ ಮನೆಯೊಳಗೆ ಏಕಾಂತದಲ್ಲಿ ಬದುಕಿದರು. ಅದೃಷ್ಟವಶಾತ್ ಅವರ ಪತಿ ಅಧ್ಯಾಪಕರಾಗಿದ್ದು ಅವರು ತೀರಿಕೊಂಡ ಮೇಲೂ ಕುಟುಂಬ ಪಿಂಚಣಿಯಲ್ಲಿ ಬದುಕಿಬಿಟ್ಟರು. ಅನಾರೋಗ್ಯವಾದರೆ ಆಸ್ಪತ್ರೆಗೂ ಹೋಗಲಿಲ್ಲ. ಇದರ ಮೇಲೆ ಯಾರಾದರೂ ಅವರನ್ನು ನೋಡಲು ಹೋದರೆ ಅವರನ್ನು ಜನ್ಮಜನ್ಮಾಂತರದ ಸಂಬಂಧದವರಂತೆ ಮಾತನಾಡಿಸುತ್ತಿದ್ದರು. ತೀರಿಕೊಳ್ಳುವ ವರೆಗೆ ಪಿಂಚಣಿ ಹಣ ಖರ್ಚು ಮಾಡಿ ಉಳಿದದ್ದನ್ನು ಊರ ಶಾಲೆಗೆ ದಾನ ಮಾಡಿಬಿಟ್ಟರು. ಹೀಗಾಗಿ ನನಗೆ ಛಿದ್ರಗೊಂಡ ಬೆಂಕಿ–ಬದುಕಿನ ಚಿತ್ರದ ಮುಂದೆ ನೆನಪಾದ ಈ ಸಂಗತಿ ಮತ್ತು ಜೇಮ್ಸ್ ಸೈಮನ್ ಅವರ ಏಕಾಂತದ ಕಥೆಯೊಂದಿಗೆ ಅದೇ ಬಂಡೆಯ ಕೆಳಗೆ ನೋಡಿದ ಮತ್ತೊಂದು ವಿಸ್ಮಯವನ್ನು ಇಲ್ಲಿಯೇ ಹೇಳಬೇಕಾಗಿದೆ.

ಛಿದ್ರಗೊಂಡ ಯುವಕನ ಚಿತ್ರದ ಬಂಡೆಯ ಕೆಳಕ್ಕೆ ಸ್ವಲ್ಪ ಈ ಕಡೆಗೆ ಒಂದು ದೊಡ್ಡ ವೃತ್ತವಿದ್ದು ಅದರೊಳಗೆ ಸಣ್ಣ ಸಣ್ಣ ಕಾಲುದಾರಿಗಳಿದ್ದವು. ಆ ಪಾದಚಾರಿ ದಾರಿಯು ಒಬ್ಬೊಬ್ಬರೇ ಅಥವಾ ಇಬ್ಬಿಬ್ಬರು ಜತೆಯಲ್ಲಿ ನಡೆಯುವಂತಿತ್ತು. ಹಾಗೆ ಒಬ್ಬರೋ ಇಬ್ಬರೋ ಆ ವೃತ್ತದೊಳಗಿನ ದಾರಿಯಲ್ಲಿ ಸುತ್ತು ಹೊಡೆಯುತ್ತಿದ್ದರೆ ಅದು ಎಲ್ಲಿಗೋ ಕೊನೆಯಾಗುತ್ತ ನಿಂತು ಬಿಡುವಂತಿತ್ತು. ಎದುರು ಬಂದವರಿಗೂ ಅಲ್ಲಿಯೇ ದಾರಿ ಕೊನೆಯಾಗಿ ನಿಂತುಬಿಡುವಂತಿರುತ್ತದೆ. ಹಾಗೆ ಎದುರು ನಿಂತವರು ಪರಸ್ಪರ ನಕ್ಕು ಕೈ ಮುಗಿದು ಶುಭಾಶಯಗಳನ್ನು ಹೇಳಿಕೊಳ್ಳುತ್ತ ಹಿಂದೆ ಸರಿಯಬಹುದು, ಪಕ್ಕ ಸರಿಯಬಹುದು. ಇಂಥದೊಂದು ವೃತ್ತಾಕಾರ ನೋಡಿದ ನನಗೆ ಬೆಂಗಳೂರು ಬಳಿಯ ಬನ್ನೇರುಘಟ್ಟದ ಚಂಪಕಧಾಮ ಗುಡಿಯ ಹಿಂಭಾಗದ ಬೆಟ್ಟವನ್ನು ದಾಟಿ ಅರಣ್ಯದೊಳಗಿರುವ ಅಂಬಾ ಭವಾನಿಯ ಗುಡಿಯ ಕಡೆಗೆ ನಡೆಯುವಾಗ ದಾರಿ ಬಳಿಯಲ್ಲಿ ಇಂಥದೇ ವೃತ್ತವಿದ್ದುದು ನೆನಪಾಯಿತು. ವೃತ್ತದ ಅತ್ತ ಕಡೆ ಸ್ತ್ರೀ ದೇವತೆಯ ಪುಟ್ಟ ಗುಡಿ ಇತ್ತು. ಗುಡ್ಡವಿಳಿದು ಅಂಬಾ ಭವಾನಿಯ ಗುಡಿಯ ಕಡೆ ಹೋಗುವವರಿಗೆ ಮಾತ್ರ ಈ ವೃತ್ತ ದಾರಿಯ ಪಕ್ಕಕ್ಕಿರುವುದು ಕಾಣಿಸುತ್ತದೆ. ಮದುವೆಯಾದ